ಮಾನ್ಯ ವಿಧಾನಪರಿಷತ್ ಸದಸ್ಯರಾದ ಶ್ರೀ ಸಿ.ಎನ್.ಮಂಜೇಗೌಡ ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.

## ಪ್ರಸ್ತಾವನೆ:

ಮೈಸೂರು ಜಿಲ್ಲೆಯಲ್ಲಿ ಅದರಲ್ಲೂ ನಗರ ಭಾಗದಲ್ಲಿ ರಾಜ್ಯದ ನಾನಾ ಭಾಗದ ಕಲೆ, ಸಾಹಿತ್ಯ, ಕ್ರೀಡಾಸಾಧಕರು, ಮಾಜಿ ಸೈನಿಕರು, ಸ್ವಾತಂತ್ರ ಹೋರಾಟಗಾರರು ಮೈಸೂರಿನಲ್ಲಿ ಮನೆ ಕಟ್ಟಬೇಕೆಂಬ ಉದ್ದೇಶದಿಂದ ವರ್ಷದ ಆರಂಭದಲ್ಲಿಯೇ ನಿವೇಶನಕ್ಕಾಗಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಆದರೆ, ವರ್ಷ ಕಳೆಯುತ್ತಿದ್ದರೂ ನಿವೇಶನ ಸಿಗದೆ, ತಾವು ಕಟ್ಟಿದ ಮುಂಗಡ ಹಣವೂ ಇಲ್ಲದೆ ಅತಂತ್ರರಾಗಿದ್ದಾರೆ. ನಾನಾ ಕಾರಣದಿಂದ ನಿಯಮ ಉಲ್ಲಂಘನೆ ಮಾಡಿದ್ದ ನಿವೇಶನದಾರರಿಂದ ದೇವನೂರು ಮೂರನೇ ಹಂತದಲ್ಲಿ ವಾಪಸ್ ಪಡೆಯಲಾದ 188 ನಿವೇಶನಗಳಲ್ಲಿ ಎಚ್. ಕೆಟಗರಿಯಲ್ಲಿ ಬಿಡಿ ನಿವೇಶಗಳಾಗಿ ಸಾಧಕರಿಗೆ ಹಂಚಿಕೆ ಮಾಡಲಾಗುತ್ತಿದೆ. ಅದಕ್ಕಾಗಿ 2023 ಫೆ.12 ರಂದು ಅರ್ಜಿ ಆಹ್ವಾನಿಸಲಾಗಿತ್ತು. ಇದರಲ್ಲಿ ಸಿನಿಮಾ ನಿರ್ದೇಶಕರು, ಹಿರಿಯ ನಟರು, ಏಕಲವ್ಯ ಪ್ರಶಸ್ತಿ ಪಡೆದಕ್ರೀಡಾ ಸಾಧಕರು, ಸ್ವಾತಂತ್ರ್ಯ ಹೋರಟಗಾರರು, ಮಾಜಿ ಸೈನಿಕರು ಸೇರಿದಂತೆ ಒಟ್ಟು 578 ಮಂದಿ ಲಕ್ಷಾಂತರ ರೂ. ಮುಂಗಡ ಹಣ ಕಟ್ಟಿ ಅರ್ಜಿ ಸಲ್ಲಿಸಿದ್ದಾರೆ. ಬಂದ ಅರ್ಜಿಗಳನ್ನು ವಿಂಗಡಣೆ ಮಾಡಿರುವುದನ್ನು ಬಿಟ್ಟರೆ ಮುಂದಿನ ಪ್ರಕ್ರಿಯೆ ನಡೆದಿಲ್ಲ 6*9 ಮೀಟರ್ ಅಳತೆಯ ನಿವೇಶನಾಕಾಂಕ್ಷಿಗಳು, 54,23,000 ರೂ. ಮೊತ್ತದ ನಿವೇಶನಕ್ಕೆ 52,300 ರೂ. ಗಳನ್ನು ಮುಂಗಡವಾಗಿ ಇಎಂಡಿ ಕಟ್ಟಿದ್ದಾರೆ. 9*12 ಮೀ ಅಳತೆಗೆ 10,46,000 ರೂ. ಮೊತ್ತಕ್ಕೆ 1,04,600 ರೂ. ಪಾವತಿಸಿದ್ದಾರೆ. 12*18 ಮೀ ಅಳತೆ ನಿವೇಶನಕ್ಕೆ 20,92,000 ರೂ. ಪಾವತಿಸಿದ್ದಾರೆ. ಹೀಗೆ ಲಕ್ಷಾಂತರ ರೂ. ಮುಂಗಡ ಹಣವನ್ನು ಕಷ್ಟಪಟ್ಟು ಹೊಂದಿಸಿ ಪಾವತಿಸಿದವರು ನಿವೇಶನ ಹಂಚಿಕೆ ವಿಳಂಬದಿಂದಾಗಿ ಸಂಕಷ್ಟಕ್ಕೆ ಸಿಲುಕಿದ್ದಾರೆ. ಸಾಲ ಮಾಡಿ ಹಣ ಕಟ್ಟಿದ ಕೆಲವರು 10 ತಿಂಗಳಿಂದ ಬಡ್ಡಿ ಕಟ್ಟುತ್ತಿದ್ದು, ಕೂಡಲೇ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕೆಂದು ಒತ್ತಾಯಿಸಿರುವ ಬಗ್ಗೆ.

## ಉತ್ತರ:

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಿವೇಶನ ಹಂಚಿಕೆ) ನಿಯಮಗಳು, 1991ರ ನಿಯಮ 6 ಮತ್ತು ಸರ್ಕಾರದ ಸುತ್ತೋಲೆ ಸಂಖ್ಯೆ ನಅಇ 291 ಅಪ್ರಾವಿ 1998, ದಿನಾಂಕ 24.11.2000 ರಲ್ಲಿನ ಮಾರ್ಗಸೂಚಿಗಳನ್ನು ಅನುಸರಿಸಿ ದಿನಾಂಕ 27.08.2021 ಹಾಗೂ 24.01.2023 ರಂದು ನಡೆದ ಪ್ರಾಧಿಕಾರದ ಬಿಡಿ ನಿವೇಶನಗಳ ಉಪಸಮಿತಿ ಸಭೆಯಲ್ಲಿ ನಿರ್ಣಯಿಸಿದಂತೆ ಪ್ರಾಧಿಕಾರದಲ್ಲಿ ಲಭ್ಯವಿರುವ ನಿವೇಶನಗಳ ಪೈಕಿ ಶೇ.15 ರಷ್ಟು ಬಿಡಿ ನಿವೇಶನಗಳನ್ನು ಈ ಕೆಳಕಂಡ ಪ್ರವರ್ಗಗಳಲ್ಲಿ ಮಂಜೂರು ಮಾಡಲು ದಿನಾಂಕ 08.02.2023 ರಂದು ಪ್ರಾಧಿಕಾರದಿಂದ ಅಧಿಸೂಚನೆ ಹೊರಡಿಸಲಾಗಿರುತ್ತದೆ.

a. **ಪ್ರವರ್ಗ–ಬಿ:** ಕರ್ನಾಟಕ ರಾಜ್ಯದ ನಿವಾಸಿಗಳಾಗಿರುವ, ಕ್ರೀಡೆಯಲ್ಲಿ ಅಂತರಾಷ್ಟ್ರೀಯ/ರಾಷ್ಟ್ರೀಯ ಮಟ್ಟದಲ್ಲಿ ವಿಶೇಷ ಮಾನ್ಯತೆ ಪಡೆದಿರುವ ವ್ಯಕ್ತಿಗಳು. (ಶೇ.5%)
b. **ಪ್ರವರ್ಗ–ಸಿ:** ಕಲೆ/ವಿಜ್ಞಾನ/ಸಾಹಿತ್ಯ/ವೈದ್ಯಕೀಯ ಹಾಗೂ ಸಾರ್ವಜನಿಕ ಆಡಳಿತದಲ್ಲಿ ಅಂತರಾಷ್ಟ್ರೀಯ /ರಾಷ್ಟ್ರೀಯ ಮಟ್ಟದಲ್ಲಿ ವಿಶೇಷ ಮಾನ್ಯತೆ ಪಡೆದಿರುವ ವ್ಯಕ್ತಿಗಳು. (ಶೇ.5%)
c. **ಪ್ರವರ್ಗ–ಡಿ:** ಕರ್ನಾಟಕ ರಾಜ್ಯದ ನಿವಾಸಿಗಳಾಗಿರುವ ಮಾಜಿ ಸೈನಿಕರು ಹಾಗೂ ಸೈನಿಕ ಸಿಬ್ಬಂದಿ. (ಶೇ.2%)
d. **ಪ್ರವರ್ಗ–ಇ:** 10 ವರ್ಷಗಳ ಅವಧಿಗೆ ಕಡಿಮೆ ಇಲ್ಲದಂತೆ ಸಂಬಂಧಪಟ್ಟ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ವಾಸವಾಗಿರುವ ಸ್ವಾತ್ರಂತ್ಯ ಯೋಧರು. (ಶೇ.2%)

18

e. **ಪ್ರವರ್ಗ–ಎಫ್:** ಕರ್ತವ್ಯದಲ್ಲಿ ನಿರತರಾಗಿದ್ದಾಗ ನಿಧನ ಹೊಂದಿದ ರಾಜ್ಯ ಸರ್ಕಾರಿ ನೌಕರರ ಅವಲಂಬಿತರು. (ಶೇ.1%)

**ಅಧಿಸೂಚನೆ ಹೊರಡಿಸಲಾದ ಒಟ್ಟು ನಿವೇಶನಗಳ ಸಂಖ್ಯೆ –188 (ದೇವನೂರು 3ನೇ ಹಂತ ಬಡಾವಣೆ)**

20*30 – 47

30*40 – 47

40*60 – 47

50*80 – 47

**ಪ್ರಾಧಿಕಾರಕ್ಕೆ ಸ್ವೀಕೃತಗೊಂಡ ಅರ್ಜಿಗಳ ಸಂಖ್ಯೆ – 578**

20*30 – 61

30*40 – 185

40*60 – 170

50*80 -- 162

ದೇವನೂರು ಬಡಾವಣೆಯಲ್ಲಿನ ಮಾರ್ಗಸೂಚಿ ದರ ಹಾಗೂ ಚಾಲ್ತಿಯಲ್ಲಿರುವ ಹಂಚಿಕೆ ದರಗಳನ್ನು ಗಮನದಲ್ಲಿಟ್ಟುಕೊಂಡು ವಿವಿಧ ಕ್ಷೇತದಲ್ಲಿನ ಸಾಧಕರಿಗೆ ಅವರ ಸೇವೆಯನ್ನು ಗುರುತಿಸಿ ನಿವೇಶನ ನೀಡುತ್ತಿರುವುದರಿಂದ ನಿವೇಶನದ ದರವನ್ನು ಒಂದು ಚದರ ಅಡಿಗೆ ರೂ.900/–ರಂತೆ ನಿಗಧಿಪಡಿಸಿ ಈ ಕೆಳಗಿನಂತೆ ನಿವೇಶನಗಳಿಗೆ ದರ ಹಾಗೂ ಮುಂಗಡ ಠೇವಣಿಯನ್ನು ನಿಗಧಿಪಡಿಸಲಾಗಿರುತ್ತದೆ

| ಅಳತೆ (ಮೀ ಗಳಲ್ಲಿ) | ನಿವೇಶನದ ದರ | ಮುಂಗಡ ಠೇವಣಿ (ಶೇ.10 ರಷ್ಟು) |
|---|---|---|
| 6*9 | ರೂ.5,23,000/– | ರೂ. 52,300/– |
| 9*12 | ರೂ.10,46,000/– | ರೂ. 1,04,600/– |
| 12*18 | ರೂ.20,92,000/– | ರೂ.2,09,200/– |
| 15*24 | ರೂ.34,86,000/– | ರೂ.3,48,600/– |

ಪ್ರಸ್ತುತ ಬಿಡಿ ನಿವೇಶನಕ್ಕೆ ಸ್ವೀಕೃತವಾಗಿರುವ ಅರ್ಜಿಗಳು ಪರಿಶೀಲನಾ ಹಂತದಲ್ಲಿದ್ದು, ಸದರಿ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ಪ್ರಾಧಿಕಾರದ ಸಭೆಯ ನಿರ್ಣಯದೊಂದಿಗೆ ಸರ್ಕಾರದ ಅನುಮೋದನೆಗೆ ಪ್ರಸ್ತಾವನೆಯು ಸ್ವೀಕೃತವಾಗಬೇಕಾಗಿದ್ದು, ಈ ಸಂಪೂರ್ಣ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಲು ಕನಿಷ್ಠ 3 ತಿಂಗಳ ಕಾಲಾವಕಾಶ ಬೇಕಾಗಿರುತ್ತದೆ.

**ಸಂಖ್ಯೆ: ನಅಇ 376ಮೈಅಪ್ರಾ2023(ಇ)**

7/12/2023

(ಸುರೇಶ ಬಿ.ಎಸ್)
ನಗರಾಭಿವೃದ್ಧಿ ಮತ್ತು ನಗರ
ಯೋಜನೆ ಸಚಿವರು